# ಶ್ರೀಮಾತೆಯೊಡನೆ ಪ್ರಥಮ ಭೇಟಿ

ಸ್ವಾಮಿ ವಿರಜಾನಂದ

*ಶ್ರೀಶಾರದಾದೇವಿಯವರ ಮಾತೃಪ್ರೇಮದ ಒಂದು ಹೃದಯಂಗಮ ಚಿತ್ರವನ್ನು ಈ ಸ್ಮೃತಿಕಥನದಲ್ಲಿ ನಾವು ಕಾಣುತ್ತೇವೆ. ಸ್ವಾಮಿ ವಿರಜಾನಂದರು ಶ್ರೇಷ್ಠ ಅನುಭಾವಿಗಳೂ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರೂ (೧೯೩೮-೧೯೫೧) ಆಗಿದ್ದರು. ಈ ಸ್ಮೃತಿಕಥೆಯನ್ನು ಕನ್ನಡಕ್ಕೆ ಅನುವಾದಿಸಿದವರು ಬೆಂಗಳೂರಿನ ಗಾಂಧಿ ಕೃಷಿವಿಜ್ಞಾನ ಕೇಂದ್ರದಲ್ಲಿ ಸಂಖ್ಯಾಸಂಗ್ರಾಹಕಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಇ. ವಸಂತಕುಮಾರ ಅವರು.*

ಅಕ್ಟೋಬರ್ ೧೮೯೧. ಹೊಸ ಬ್ರಹ್ಮಚಾರಿಯಾಗಿ ಬಾರಾನಗರ ಮಠದಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸಿಶಿಷ್ಯರೊಂದಿಗೆ ನಾನು ಆಗಲೇ ಒಂದು ವರ್ಷ ಕಳೆದಿದ್ದರೂ ಶ್ರೀಮಾತೆಯವರನ್ನು ನೋಡುವ ಅವಕಾಶ ನನಗಿನ್ನೂ ದೊರೆತಿರಲಿಲ್ಲ. ಕೊನೆಗೆ ಈಗ ನನ್ನ ಅದೃಷ್ಟ ಒಳ್ಳೆಯದಿರುವಂತೆ ಕಂಡಿತು. ಮಹಾಮಾತೆಯವರು ದೇವಿ ಜಗದ್ಧಾತ್ರಿಯ ಪೂಜೆಯನ್ನು ಜಯರಾಂಬಾಟಿಯಲ್ಲಿ ತಮ್ಮ ತೌರು ಮನೆಯಲ್ಲಿ ಆಚರಿಸಲು ನಿಶ್ಚಯಿಸಿರುವುದಾಗಿಯೂ ಮತ್ತು ಶ್ರೀ ಶರತ್ ಮಹಾರಾಜರು (ಸ್ವಾಮಿ ಶಾರದಾನಂದರು) ಹಬ್ಬಕ್ಕೆ ಆವಶ್ಯಕವಾದ ಕೆಲವು ಪದಾರ್ಥಗಳನ್ನು ತೆಗೆದುಕೊಂಡು ಕೆಲವು ಭಕ್ತರೊಡನೆ ಅಲ್ಲಿಗೆ ಹೋಗುವುದಾಗಿಯೂ ನನಗೆ ತಿಳಿಯಿತು. ಒಂದು ದಿನ ಶರತ್ ಮಹಾರಾಜರು ಅನಿರೀಕ್ಷಿತವಾಗಿ, "ನಮ್ಮ ಜೊತೆ ಬರುತ್ತೀಯಾ?" ಎಂದು ನನ್ನನ್ನು ಕೇಳಿದರು. ಈ ಅತ್ಯಂತ ಸ್ವಾಗತಾರ್ಹ ಸಲಹೆಯನ್ನು ಕೇಳಿ ನಾನು ಸಂತೋಷದಿಂದ ಉಬ್ಬಿಹೋದೆ. ಪ್ರಯಾಣಕ್ಕೆ ಆತುರವಾಗಿ ಸಿದ್ಧತೆ ಮಾಡಿಕೊಂಡೆ.



ನಾವು ಕಾಮಾರಪುಕುರದ ಮೂಲಕ ಜಯರಾಂಬಾಟಿಯನ್ನು ತಲುಪಿ ಶ್ರೀಮಾತೆಯವರನ್ನು ಸಂಧಿಸಿದೆವು. ಆಗ ಅವರು ತಮ್ಮ ಕೈಗಳಿಂದ ನನ್ನ ಗಲ್ಲವನ್ನು ಮುಟ್ಟಿ ಮುತ್ತಿಟ್ಟರು. (ಇದು ಬಂಗಾಳದಲ್ಲಿ ತಾಯಂದಿರು ಮಗನನ್ನು ಸ್ವಾಗತಿಸುವ ಸಾಂಪ್ರದಾಯಿಕ ರೀತಿ.)

ನಾವು ಅಲ್ಲಿಗೆ ಹೋದುದಕ್ಕಾಗಿ ಶ್ರೀಮಾತೆಯವರು ಅದೆಷ್ಟು ಸಂತೋಷಪಟ್ಟರು! ನಮಗೆಲ್ಲರಿಗೂ ಅನುಕೂಲಕರವಾದ ವ್ಯವಸ್ಥೆಯನ್ನು ಹೇಗೆ ಮಾಡುವುದೆಂಬುದರ ಬಗ್ಗೆಯೇ ಅವರಿಗೆ ನಿರಂತರ ಯೋಚನೆ. ಬೆಳಗಿನಿಂದ ರಾತ್ರಿಯವರೆಗೆ ನಮ್ಮ ಸಂತೋಷಕ್ಕಾಗಿ ಅವರು ಎಡೆಬಿಡದೆ ಮಾಡಿದುದೆಲ್ಲಾ ಅವರಿಗೆ ಸಾಲದು ಎಂಬಂತೆ ಕಂಡಿತು. ಬೆಳಗ್ಗೆ ಮತ್ತು ಸಂಜೆ ಅವರೇ ಅಡುಗೆ ಮಾಡಿದರು. ಅದೆಷ್ಟು ಬಗೆಯ ತಿಂಡಿ-ತಿನಿಸುಗಳು ಮತ್ತು ಅವು ಅದೆಷ್ಟು ರುಚಿ! ಅದು ದೇವಲೋಕದ ರುಚಿಯಂತಿತ್ತು! ನಾವು ಊಟ ಮಾಡುವಾಗ ಅವರು ನಮ್ಮ ಹತ್ತಿರ ಕುಳಿತಿರುತ್ತಿದ್ದರು ಮತ್ತು ನಾವು ಇನ್ನೂ ತಿನ್ನಬೇಕೆಂದು ಒತ್ತಾಯಿಸುತ್ತಿದ್ದರು. ನನ್ನ ಹಸಿವು ಹೆಚ್ಚಾಗಿತ್ತು. ಆಹಾರವನ್ನು ಶ್ರೀಮಾತೆಯವರು ತಾವೇ ತಯಾರಿಸಿದುದೇ ಅದಕ್ಕೆ ಹೆಚ್ಚು ಕಾರಣ. ಕೆಲವು ವೇಳೆ ಅವರು ಶ್ರೀರಾಮಕೃಷ್ಣರು ಇಷ್ಟಪಡುತ್ತಿದ್ದ ಕೆಲವು ಪಲ್ಯಗಳನ್ನು ಮಾಡುತ್ತಿದ್ದರು.

ನಾವು ನಾಲ್ಕು ಜನರನ್ನು (ಶರತ್ ಮಹಾರಾಜರು, ಹರಮೋಹನ್ ಬಾಬು, ಸಂದೇಲ್ ಮಹಾಶಯ ಮತ್ತು ನಾನು) ಮನೆಯ ಹೊರಗೆ ಇರುವ ಸಣ್ಣ ಕೊಠಡಿಯಲ್ಲಿ ಇರಿಸಿದ್ದರು. ಅದರ ಪಕ್ಕದಲ್ಲೆ, ಜಗದ್ಧಾತ್ರಿಯ ಪೂಜೆ ಮಾಡಬೇಕಿದ್ದ ತೆರೆದ ಹಜಾರ ಇತ್ತು. ನಮ್ಮ ಕೋಣೆಯ ಹಿಂದಿನ ಬಾಗಿಲನ್ನು ತೆರೆದರೆ ಒಳಗಡೆ ಅಂಗಳ ಕಾಣುತ್ತಿತ್ತು, ಅದರ ಮತ್ತೊಂದು ಕೊನೆಗೆ ಶ್ರೀಮಾತೆಯ ಜೋಪಡಿ ಇತ್ತು. ಕೆಲವು ವೇಳೆ ಈ ಬಾಗಿಲು ತೆರೆದಿದ್ದಾಗ ಜೋಪಡಿಯ ವರಾಂಡದಲ್ಲಿ ಶ್ರೀಮಾತೆ ತರಕಾರಿ ಹೆಚ್ಚುವುದು ಮತ್ತು ಇತರ ಮನೆಗೆಲಸ ಮಾಡುವುದನ್ನು ನೋಡಲು ನನಗೆ ಸಾಧ್ಯವಾಗುತ್ತಿತ್ತು. ಧ್ಯಾನ ಮತ್ತು ಜಪ, ಹರಟೆ, ಪುಷ್ಕಳ ಭೋಜನ, ನಿದ್ರೆ, ಮಧ್ಯಾಹ್ನದ ವೇಳೆ ನದೀ ತೀರದಲ್ಲಿ ಸುತ್ತಾಡುವುದು, ಇವನ್ನು ಬಿಟ್ಟರೆ ನನಗೆ ಮತ್ತಾವ ನಿಗದಿತ ಕೆಲಸ ಇರಲಿಲ್ಲ. ಹಳ್ಳಿಯ ಒಳಗಡೆ ಇರುವ ಮತ್ತು ನದೀತೀರದ ಮರಗಿಡಗಳಿಂದ ಪೂಜೆಗಾಗಿ ಹೂವು ಮತ್ತು ಬಿಲ್ವಪತ್ರೆಯನ್ನು ಬಿಡಿಸಿಕೊಂಡು ಬರುವ ಕೆಲಸವನ್ನು ನಾನಾಗಿಯೇ ಕೈಕೊಂಡಿದ್ದೆ. ನಾನು ಆಗ ಬಹಳ ಸಣ್ಣ ವಯಸ್ಸಿನವನಾಗಿದ್ದುದರಿಂದ ಶ್ರೀಮಾತೆಯವರು ನನ್ನೊಡನೆ ಎಂದಿನಂತೆ ಸಂಕೋಚದಿಂದ ನಡೆದುಕೊಳ್ಳುತ್ತಿರಲಿಲ್ಲ. ಆದುದರಿಂದ ಶರತ್ ಮಹಾರಾಜರ ಮತ್ತು ಹಿರಿಯ ಭಕ್ತರ ಕೆಲಸ ಕಾರ್ಯಗಳನ್ನು ಮಾಡುವುದು ನನ್ನ ಪಾಲಿನ ಕೆಲಸವಾಯಿತು. ಇದಕ್ಕಾಗಿ ನಾನು ಅದು-ಇದು ತರಲು ಒಳಗಿನ ಅಂಗಳಕ್ಕೆ ಹೋಗಬೇಕಾಗುತ್ತಿತ್ತು. ಇದು ನನಗೊಂದು ದೊಡ್ಡ ವರವಾಯಿತು, ಹಲವುಬಾರಿ ಶ್ರೀಮಾತೆಯವರ

ದರ್ಶನ ಪಡೆಯಲು ನನಗೆ ಅವಕಾಶ ದೊರೆಯಿತು.

ಶ್ರೀಮಾತೆಯವರ ತಾಯಿಯನ್ನು ದೀದಿಮಾ (ಅಜ್ಜಿ) ಎಂದು ನಾವು ಕರೆಯುತ್ತಿದ್ದೆವು. ಅವರು ಬಹಳ ಸರಳ ಮತ್ತು ಮಧುರ ಸ್ವಭಾವದವರು. ಅವರು ಯಾವಾಗಲೂ ದನಕರುಗಳನ್ನು ನೋಡಿಕೊಳ್ಳುವುದು, ಕೊಟ್ಟಿಗೆಯನ್ನು ತೊಳೆಯುವುದು, ಹೊಲದಲ್ಲಿ ಕೆಲಸ ಮಾಡುವವರಿಗೆ ಊಟ ಬಡಿಸುವುದು, ಅಕ್ಕಿಯಿಂದ ಹೊಟ್ಟನ್ನು ತೆಗೆಯುವುದು ಮುಂತಾದ ವಿವಿಧ ಮನೆಗೆಲಸಗಳಲ್ಲಿ ನಿರತರಾಗಿರುತ್ತಿದ್ದರು. ಆದರೂ ಅವರ ಮುಖದ ಮೇಲೆ ಯಾವಾಗಲೂ ಮಂದಹಾಸವಿರುತ್ತಿತ್ತು. ರಾಮಕೃಷ್ಣರ ಯೌವನದ ಕಾಲದ ಅನೇಕ ಕಥೆಗಳನ್ನು ಅವರು ನಮಗೆ ಹೇಳುತ್ತಿದ್ದರು. ನಾವು ಅವರನ್ನು ದೀದಿಮಾ ಎಂದು ಕರೆಯುತ್ತಿದ್ದುದರಿಂದ ಅವರಿಗೆ ಬಹಳ ಸಂತೋಷವಾಗುತ್ತಿತ್ತು.

ದೀದಿಮಾ ಹೇಳಿದರು, "ನೋಡಿ, ಆ ಕಾಲದಲ್ಲಿ ಜನರು ನನ್ನ ಅಳಿಯನನ್ನು (ಶ್ರೀರಾಮಕೃಷ್ಣರನ್ನು) ಹುಚ್ಚನೆಂದು ಕರೆದರು. ಶಾರದೆಯ ಅದೃಷ್ಟಕ್ಕೆ ವ್ಯಥೆ ಪಟ್ಟರು. ನನ್ನ ಮೇಲೂ ಅದೆಷ್ಟು ನಿಂದೆಯ ಮಳೆ ಸುರಿದರು! ನನ್ನ ಮೂಕ ಸಂಕಟಕ್ಕೆ ಕೊನೆಯಿರಲಿಲ್ಲ! ಆದರೆ ಇಂದು ನೋಡಿ, ಗೌರವಸ್ಥ ಮನೆಯ ಎಷ್ಟೊಂದು ಗಂಡಸರು ಮತ್ತು ಹೆಂಗಸರು ಶಾರದೆಯನ್ನು ದೇವತೆಯಂತೆ ಕಂಡು ಅವಳ ಪಾದಗಳನ್ನು ಪೂಜಿಸುವರು!"

ನಾವು ಜಯರಾಂಬಾಟಿಯಲ್ಲಿ ಇದ್ದಾಗ ಅನೇಕ ಬಾರಿ ಕಾಮಾರಪುಕುರಕ್ಕೆ ಹೋಗಿಬಂದೆವು. ಶ್ರೀರಾಮಕೃಷ್ಣರು ವಾಸಿಸಿದ ಆ ಜೋಪಡಿ! ಅದು ಎಂತಹ ಸೆಳೆತವನ್ನು ಹಬ್ಬಿಸಿತು! ನನ್ನ ಮನಸ್ಸಿನ ಆಳದಲ್ಲಿ ನಾವು ಪವಿತ್ರವಾದ ನೆಲದ ಮೇಲೆ ನಡೆಯುತ್ತಿರುವೆವು ಎನಿಸಿತು. ಆ ಸ್ಥಳ ಅಮೃತಧಾಮದಂತೆ ಕಂಡಿತು. ವಾತಾವರಣದಲ್ಲೆಲ್ಲ ಆಧ್ಯಾತ್ಮಿಕತೆಯ ಅನುಭವ ಹರಡಿತ್ತು. ಜಯರಾಂಬಾಟಿಗೆ ಹಿಂತಿರುಗುವಾಗ ಕಾಮಾರಪುಕುರದಿಂದ ಶ್ರೀಮಾತೆಯವರಿಗಾಗಿ ಜಿಲೇಬಿ ಮತ್ತು ಮಿಠಾಯಿ ತರುತ್ತಿದ್ದೆವು. ಅದರಲ್ಲಿ ಬಹುಭಾಗವನ್ನು ನಮಗೆ ಬೆಳಗಿನ ಉಪಾಹಾರದಲ್ಲಿ ಶ್ರೀಮಾತೆ ಪುರಿಗೆ ತುಪ್ಪವನ್ನು ಸವರಿ ಅದರ ಜತೆ ಕೊಡುತ್ತಿದ್ದರು. ಎಂತಹ ಆತುರದಿಂದ ಆ ಸ್ವಾದಿಷ್ಟ ತಿಂಡಿಯನ್ನು ಭುಂಜಿಸುತ್ತಿದ್ದೆವು!

ಜಗದ್ಧಾತ್ರಿಯ ಹಬ್ಬ ಬಹು ಸಂಭ್ರಮದಿಂದ ಸಾಗಿತು. ಕುಟುಂಬದ ಸಂಪ್ರದಾಯದಂತೆ ಪೂಜೆ ಮೂರು ದಿನಗಳ ಕಾಲ ನಡೆಯಿತು. ದೇವಿಯ ಮಣ್ಣಿನ ಮೂರ್ತಿ ಅತಿ ಸುಂದರವಾಗಿದ್ದು, ಮುಖ ಜಗನ್ಮಾತೆಯ ದೈವೀ ಅನುಕಂಪೆಯನ್ನು ಬಹು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತಿತ್ತು. ದೇವಿಯು ರಕ್ತಮಾಂಸಗಳಿಂದ ಕೂಡಿ ಜೀವಂತವಾಗಿ ತನ್ನ ಮರ್ತ್ಯ ಶಿಶುಗಳ ನೈವೇದ್ಯವನ್ನು ಸ್ವೀಕರಿಸಲು ನಿಜವಾಗಿ ಬಂದಂತೆ ಭಾಸವಾಗುತ್ತಿತ್ತು. ಪೂಜೆ ಮಾಡುವ ಸ್ಥಳದಲ್ಲಿ ಆರತಿಯ ಸಮಯದಲ್ಲಿ ಶ್ರೀಮಾತೆಯೇ ಕೈಮುಗಿದು ನಿಂತಿರುತ್ತಿದ್ದರು ಮತ್ತು ಕೆಲವು ವೇಳೆ ದೇವಿಗೆ ಚಾಮರ ಬೀಸುತ್ತಿದ್ದರು. ಎಲ್ಲ ದಿನಗಳಲ್ಲಿಯೂ ಅವರು ಇತರ ಹೆಂಗಸರೊಂದಿಗೆ ಪೂಜೆ ಮತ್ತು ಅಡುಗೆಯ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ನಿರತರಾಗಿರುತ್ತಿದ್ದರು. ಮೂರ್ತಿಯನ್ನು ನೋಡಲು ಜನರು ಹತ್ತಿರ ಮತ್ತು ದೂರದ ಸ್ಥಳಗಳಿಂದ ಬಂದು ಸೇರಿದ್ದರು. ಪ್ರತಿನಿತ್ಯ ನೂರಾರು ಜನರಿಗೆ ತೃಪ್ತಿಯಾಗುವಷ್ಟು ಊಟ ಬಡಿಸಲಾಗುತ್ತಿತ್ತು. ಎರಡು ದಿನಗಳು ಬಯಲು ನಾಟಕವಿತ್ತು. ಅದನ್ನು ನೋಡಲು ಸುತ್ತಮುತ್ತಲ ಹಳ್ಳಿಗಳಿಂದೆಲ್ಲ ಗಂಡಸರು ಮತ್ತು ಹೆಂಗಸರು ಅತ್ಯಂತ ಉತ್ಸಾಹದಿಂದ ಬಂದು ತುಂಬಿದರು. ದೇವೀಮೂರ್ತಿಯ ವಿಸರ್ಜನೆಯ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ಶ್ರೀಮಾತೆ ಹಾಗೂ ಇತರ ಸ್ತ್ರೀಯರು ಕಣ್ಣೀರು ಸುರಿಸಿದರು. ಅನಿವಾರ್ಯ ವಿಯೋಗದ ದುಃಖ ನಮ್ಮನ್ನು ಕಾಡಿತು ಮತ್ತು ಬಹಳ ಪ್ರಯತ್ನದಿಂದ ಮಾತ್ರ ಕಣ್ಣೀರನ್ನು ತಡೆಯಲು ಸಾಧ್ಯವಾಯಿತು.

ಮಹದಾನಂದದಲ್ಲಿ ದಿನಗಳು ಕಳೆದವು. ಉತ್ಸವ ಮುಗಿದ ಕೆಲವು ದಿನಗಳ ನಂತರ ದುರದೃಷ್ಟವೆಂಬಂತೆ ನಾವು ನಾಲ್ವರೂ ಮಲೇರಿಯಾ ಜ್ವರಕ್ಕೆ ತುತ್ತಾದೆವು. ಆ ಸಣ್ಣ ಕೋಣೆಯಲ್ಲಿ ಪಕ್ಕ ಪಕ್ಕದ ಹಾಸಿಗೆಗಳಲ್ಲಿ ಜ್ವರದ ತಾಪದೊಡನೆ ಚಳಿಯಿಂದ ನಡುಗುತ್ತಿದ್ದೆವು. ಶ್ರೀಮಾತೆಯ ಚಿಂತೆಗೆ ಕೊನೆ ಮೊದಲಿಲ್ಲವಾಯಿತು. "ಓ, ಎಂತಹ ದುಃಸ್ಥಿತಿ! ನನ್ನ ಮಕ್ಕಳು ಇಷ್ಟೊಂದು ಯಾತನೆ ಅನುಭವಿಸುತ್ತಿರುವರಲ್ಲಾ. ಎಂತಹ ಕುಗ್ರಾಮವಿದು! ಎಳನೀರು ಮತ್ತು ಹಾಲು ಇಲ್ಲಿ ಸಿಗುವುದಿಲ್ಲವಲ್ಲ!" ಎಂದು ಅವರು ಆಲಾಪಿಸುವುದನ್ನು ಕೇಳಬಹುದಿತ್ತು. ಅವರು ಆಗೊಮ್ಮೆ ಈಗೊಮ್ಮೆ ಬಂದು ನಮ್ಮ ಕೋಣೆಯ ಬಾಗಿಲಿನ ಹತ್ತಿರ ನಿಂತು ಹೊರಗಡೆಯಿಂದ ನಮ್ಮ ಸ್ಥಿತಿಯನ್ನು ವಿಚಾರಿಸುತ್ತಿದ್ದರು. ಆಗ ಅವರ ಕಣ್ಣುಗಳಲ್ಲಿ ಎಷ್ಟು ವಾತ್ಸಲ್ಯ ಮತ್ತು ಸಹಾನುಭೂತಿಯನ್ನು ನಾನು ಗಮನಿಸಿದೆ!

ಕೈಯಲ್ಲಿ ಒಂದು ಬಟ್ಟಲನ್ನು ಹಿಡಿದು ಶ್ರೀಮಾತೆ ತಮ್ಮ ರೋಗಗ್ರಸ್ತ 'ಮಕ್ಕಳಿಗೋಸುಗ' ಹಸುಗಳನ್ನಿಟ್ಟಿರುವ ಮನೆಗಳಿಗೆ ಸ್ವಲ್ಪ ಹಾಲಿಗಾಗಿ ಬೇಡುತ್ತಾ ಹೋಗುತ್ತಿದ್ದರು. ಪ್ರಧಾನವಾಗಿ ಬೇಸಾಯಗಾರರಾದ ಆ ಸ್ಥಳದ ಜನರು ತಮ್ಮ ಜಮೀನನ್ನು ಉಳುವ ಎತ್ತುಗಳಿಗೆ ಹೆಚ್ಚು ಗಮನ ಕೊಡುತ್ತಿದ್ದರು. ಹಸುಗಳನ್ನು ನಿರ್ಲಕ್ಷಿಸುತ್ತಿದ್ದರಾದ ಕಾರಣ ಹಾಲಿನ ಕೊರತೆಯಿತ್ತು. ಶ್ರೀಮಾತೆಗೆ ಕೇವಲ ಅರ್ಧ ಅಥವಾ ಒಂದು ಪೌಂಡು ಹಾಲು ಸಂಗ್ರಹಿಸಲು ಸಾಧ್ಯವಾಗುತ್ತಿತ್ತು. ಹೇಗೋ ಕೆಲವು ದಿನಗಳ ನಂತರ ಚೇತರಿಸಿಕೊಂಡೆವು ಮತ್ತು ಎಂದಿನ ಆಹಾರ ಸೇವಿಸಲಾರಂಭಿಸಿದೆವು. ನಮ್ಮಲ್ಲಿ ಯಾರೂ ಅಂತಹ ಪ್ರಬಲವಾದ ಮಲೇರಿಯಾ ಜ್ವರಕ್ಕೆ ತುತ್ತಾಗಿರಲಿಲ್ಲ. ಆದರೆ ಅದರಿಂದ ಉಂಟಾದ ದಣಿವು ಬಹಳ ಕಾಲ ಇತ್ತು.

ನಮ್ಮ ದೀರ್ಘ ಕಾಲದ ಜಯರಾಂಬಾಟಿಯ ವಾಸದ ಪರಿಣಾಮವಾಗಿ ಮಾತೆಗೆ ಹೆಚ್ಚು ದೈಹಿಕ ಶ್ರಮವುಂಟಾಗಿ ಅವರು ಕಾಯಿಲೆಗೆ ತುತ್ತಾಗಬಹುದು. ಆದುದರಿಂದ, ಮರುಪ್ರಯಾಣ ಮಾಡಲು ಸಾಕಷ್ಟು ಶಕ್ತಿ ಬಂದಿದೆ ಎನ್ನಿಸಿದ ಕೂಡಲೆ ನಾವು

ಹೊರಡಲು ನಿರ್ಧರಿಸಿದೆವು. ಇನ್ನೂ ಸ್ವಲ್ಪ ಶಕ್ತಿ ಬರುವವರೆಗೆ ನಾವು ಸ್ವಲ್ಪ ಕಾಲ ಇರಬೇಕೆಂದು ಶ್ರೀಮಾತೆ ಬಲವಂತ ಮಾಡಿದರು. ಆದರೂ ನಾವು ನಮ್ಮ ತೀರ್ಮಾನದ ಬಗ್ಗೆ ದೃಢವಾಗಿದ್ದು ಕೊನೆಗೆ ಅವರ ಒಪ್ಪಿಗೆ ಪಡೆದೆವು.

ಎತ್ತಿನ ಗಾಡಿಗಳು ಸಿದ್ಧವಾದವು. ನಮ್ಮ ಊಟ ಮುಗಿಸಿ ಶ್ರೀಮಾತೆಯವರಿಂದ ಬೀಳ್ಕೊಂಡು ನಮ್ಮ ಸ್ಥಳಗಳಲ್ಲಿ ಕುಳಿತೆವು. ದೀದಿಮಾ, 'ಮಾಮಂದಿರು' (ಶ್ರೀಮಾತೆಯ ಸಹೋದರರು), ಮತ್ತು ಅಕ್ಕಪಕ್ಕದವರು ಗಾಡಿಗಳ ಸುತ್ತ ನಿಂತರು. ಶ್ರೀಮಾತೆ, ದೂರದಲ್ಲಿ ಮನೆಯ ಹಿಂದಿನ ಬಾಗಿಲಲ್ಲಿ ಮೌನವಾಗಿ ದೃಶ್ಯವನ್ನು ನೋಡುತ್ತಾ ನಿಂತಿದ್ದರು. ಅವರ ಕಣ್ಣುಗಳಿಂದ ನೀರು ಹರಿಯಿತು. ಅತ್ತು ಅತ್ತು ಅವರ ಕಣ್ಣು ಮುಖವೆಲ್ಲ ಕೆಂಪಾಗಿತ್ತು. ತಾಯಿಯಿಂದ ದೂರ ಹೋಗುತ್ತಿರುವೆವು ಎಂಬ ಆಲೋಚನೆಯಿಂದ ನಾವೂ ಕೂಡ ನಮ್ಮ ಹೃದಯ ಹಿಂಡುತ್ತಿರುವುದನ್ನು ಅನುಭವಿಸಿದೆವು. ನನಗೆ ಕಣ್ಣೀರನ್ನು ತಡೆಯಲು ಸಾಧ್ಯವಾಗದಾಯಿತು. ಗೋಲಾಪ್‌ಮಾ ಮತ್ತು ಯೋಗಿನ್‌ಮಾ ಕೂಡ ಅಳುತ್ತಿದ್ದರು.

ಗಾಡಿಗಳು ಹೊರಟವು. ಶ್ರೀಮಾತೆ ನಿಧಾನವಾಗಿ ದೂರದಿಂದ ನಮ್ಮನ್ನು ಹಿಂಬಾಲಿಸುತ್ತಿದ್ದರು. ಹಿಂತಿರುಗುವಂತೆ ನಾವು ಅವರನ್ನು ಮತ್ತೆ ಮತ್ತೆ ಕೇಳಿಕೊಂಡೆವು. ಆದರೆ ಅವರು ಕೇಳಲಿಲ್ಲ. ಕೊನೆಗೆ ಗಾಡಿಗಳು ತಾಲ್‌ಪುಕುರವನ್ನು ದಾಟಿದುವು ಮತ್ತು ಊರಿನ ಹೊರಗಡೆ ಇರುವ ವಿಶಾಲವಾದ ಬಯಲನ್ನು ಪ್ರವೇಶಿಸಿದುವು. ಗಾಡಿಯ ಒಳಗಿನಿಂದ ನಾನು ಎಷ್ಟು ಕಾಲ ಗಮನಿಸಲು ಸಾಧ್ಯವಾಯಿತೊ ಅಷ್ಟು ಕಾಲ ನೋಡಿದೆ, ಶ್ರೀಮಾತೆ ಕೊಳದ ಪಕ್ಕದಲ್ಲಿ ನಮ್ಮ ಮೇಲೆ ನೆಟ್ಟ ದೃಷ್ಟಿಯಿಂದ ನಿಂತಿರುವುದನ್ನು ಕಂಡೆ. ನಾನು ಮನೆಯಲ್ಲಿದ್ದಾಗ ನನ್ನ ತಾಯಿಯನ್ನು ಉತ್ಕಟವಾಗಿ ಪ್ರೀತಿಸುತ್ತಿದ್ದೆ ಮತ್ತು ಆಕೆಗೂ ನನ್ನ ಮೇಲೆ ಅಪಾರ ಪ್ರೀತಿಯಿತ್ತು. ಆದರೆ ಆ ಪ್ರೀತಿ ಶ್ರೀಮಾತೆಯಿಂದ ಪ್ರವಹಿಸಿದ ಚಿಂತಿಸಲಸದಳವಾದ ಕರುಣೆ ಮತ್ತು ವಾತ್ಸಲ್ಯದ ಮುಂದೆ ನಿಲ್ಲಲಾಗುವುದೆ? ಇಲ್ಲ, ಅವರು ನನ್ನ ಅಸಂಖ್ಯ ಹಿಂದಿನ ಜನ್ಮಗಳ ಜನನಿ—ಅನಂತ ಕಾಲದ ತಾಯಿ, ನನ್ನ ಅಸ್ತಿತ್ವಕ್ಕೇ ತಾಯಿ.

ನಾನು ಬಾರಾನಗರ ಮಠಕ್ಕೆ ಹಿಂತಿರುಗಿದೆ, ಹೃದಯದಲ್ಲಿ ದೊಡ್ಡ ಶೂನ್ಯತೆಯಿಂದ. ಆದರೆ ನಾನು ಅದನ್ನು ಶೂನ್ಯವೆಂದೇಕೆ ಕರೆಯಬೇಕು? ನಾನು ನನ್ನಲ್ಲಿ ಶ್ರೀಮಾತೆಯ ಅಲೌಕಿಕ ಕರುಣೆಯಿಂದ, ಸರ್ವರನ್ನೂ ಪ್ರೀತಿಸುವ ಜಗನ್ಮಾತೆಯ ಅಪಾರ ಕೃಪೆಯನ್ನು ತುಂಬಿಕೊಳ್ಳಲಿಲ್ಲವೇ? ಅವರ ಬಗ್ಗೆ ನಾನು ಕೇಳಿದ್ದ ಅಲ್ಪ ವಿವರಣೆಯಿಂದ ಅವರು ನಿಜವಾಗಿ ಏನಾಗಿದ್ದರೆಂದು ಊಹಿಸಿಕೊಳ್ಳಲಾಗಿರಲಿಲ್ಲ. ಅವರು ನನ್ನ ಮನಸ್ಸು ಮತ್ತು ಹೃದಯವನ್ನು ಸಂಪೂರ್ಣವಾಗಿ ಸೆಳೆದುಕೊಂಡು ತಮ್ಮದನ್ನಾಗಿ ಮಾಡಿಕೊಳ್ಳುವ ಅಂತಹ ತಾಯಿಯೆಂದು ಚಿತ್ರಿಸಿಕೊಳ್ಳಲು ಯಾರಿಗೆ ಸಾಧ್ಯವಿತ್ತು! ನಿಜ, 'ತಂದೆ'ಯನ್ನು ನೋಡುವ ಭಾಗ್ಯ ನನ್ನ ಪಾಲಿಗಿರಲಿಲ್ಲ, ಆದರೆ 'ತಾಯಿ'ಯನ್ನು ನಾನು ಕಾಣದೆ ಹೋಗಲಿಲ್ಲ!

ಶ್ರೀಮಾತೆಯವರು ೧೮೮೮ರ ಬೇಸಗೆಯ ಕೊನೆಯಲ್ಲಿ ಬೇಲೂರಿನ ಒಂದು ತೋಟದ ಮನೆಯಲ್ಲಿ ತಂಗಿದ್ದರು. ಅವರಿಗಾಗಿ ಆ ಮನೆಯನ್ನು ಭಕ್ತರು ಬಾಡಿಗೆಗೆ ತೆಗೆದುಕೊಂಡಿದ್ದರು. ನಮ್ಮ ಮಠ ಆಗ ಆಲಂಬಜಾರಿನಲ್ಲಿತ್ತು. ಸ್ವಾಮಿಗಳು ಒಬ್ಬರಲ್ಲ ಒಬ್ಬರು ಆಗಾಗ್ಗೆ ಹೋಗಿ ಶ್ರೀಮಾತೆಯವರನ್ನು ಕಂಡು ಆ ಮನೆಯಲ್ಲಿ ಒಂದೆರಡು ದಿನ ಇದ್ದು ಬರುತ್ತಿದ್ದರು. ಆಗ ಭಕ್ತರ ಸಂಖ್ಯೆ ಬಹಳ ಕಡಮೆ ಇತ್ತು; ಆದುದರಿಂದ ಶ್ರೀಮಾತೆ ಶಾಂತಜೀವನವನ್ನು ಆನಂದಿಸಬಹುದಾಗಿತ್ತು.

ಆ ಮನೆಗೆ ಅವರು ಹೊಂದಿಕೊಂಡ ಮೇಲೆ ಕೆಲವು ದಿನಗಳ ನಂತರ ಅವರ ದರ್ಶನವನ್ನು ಪಡೆಯುವ ಅವಕಾಶವನ್ನು ತೆಗೆದುಕೊಂಡೆನು. ನಾನು ಆಲಂಬಜಾರ್ ಮಠದಿಂದ ಹೋಗಿದ್ದೆ. ಇದು ನನ್ನ ಎರಡನೆಯ ಭೇಟಿಯಾಗಿತ್ತು. ನಾನು ಅವರ ಪಾದಗಳಿಗೆ ನಮಸ್ಕರಿಸಿದ ಮೇಲೆ, ಶ್ರೀಮಾತೆಯವರು "ಈ ರಾತ್ರಿ ಇಲ್ಲಿಯೇ ತಂಗು" ಎಂದು ಹೇಳಿದರು. ನಾನು ಅವರ ಮಾತಿಗೆ ವಿಧೇಯನಾಗಿ ನಡೆದುಕೊಂಡೆ. ಮಾರನೆ ಬೆಳಗ್ಗೆ ಅವರಿಂದ ಬೀಳ್ಕೊಳ್ಳಲು ಹೋದಾಗ, ಬಹಳ ಪ್ರೀತಿಯಿಂದ ಅವರು ಹೇಳಿದರು: "ಮಗು, ಈ ಬಾರಿ ನಿನ್ನನ್ನು ನೋಡಲು ನನ್ನ ಮನಸ್ಸಿಗೆ ನೋವಾಗುತ್ತಿದೆ. ಮೊದಲು ನಿನಗೆ ಎಂತಹ ದಷ್ಟಪುಷ್ಟವಾದ ದೇಹವಿತ್ತು. ಮತ್ತೆ ಮತ್ತೆ ಬಂದ ಮಲೇರಿಯಾ ಜ್ವರ ನಿನ್ನ ದೇಹವನ್ನು ಇಂತಹ ಕ್ಷೀಣ ಸ್ಥಿತಿಗೆ ತಂದಿದೆ. ನೀನೇನೋ ಮಠವನ್ನು ಸೇರಿರುವೆ, ಆದರೆ ನಿನಗೆ ತಿಳಿದಿರುವಂತೆ ಅಲ್ಲಿರುವವರೆಲ್ಲ ಕಾಸಿಲ್ಲದ ಫಕೀರರು. ನಿನಗೆ ಬೇಕಾದ ಪುಷ್ಟಿದಾಯಕ ಆಹಾರವನ್ನು ಅವರು ಹೇಗೆ ಒದಗಿಸಿಯಾರು? ನಿನ್ನ ಆರೋಗ್ಯಕ್ಕೆ ಬೇಕಾದ ಶುಶ್ರೂಷೆ ಅಲ್ಲಿ ಹೇಗೆ ಸಾಧ್ಯ? ಆದುದರಿಂದ ನಾನು ಹೇಳುವೆ, ನೀನು ನಿನ್ನ ಮನೆಗೆ ಹಿಂತಿರುಗಿ ಹೋಗು, ಸರಿಯಾದ ಆಹಾರ ಮತ್ತು ಔಷಧಿಗಳಿಂದ ನಿನ್ನ ಆರೋಗ್ಯ ಸರಿಹೋಗುವವರೆಗೆ ಅಲ್ಲಿಯೇ ಇರು."

ಶ್ರೀಮಾತೆಯವರಿಂದ ಈ ಮಾತುಗಳನ್ನು ನಾನು ಸ್ವಲ್ಪವೂ ನಿರೀಕ್ಷಿಸಿರಲಿಲ್ಲ. ಸಂಪೂರ್ಣ ಸ್ತಂಭಿತನಾದ ನನಗೆ ಸ್ವಲ್ಪ ಹೊತ್ತು ಮಾತೇ ಹೊರಡಲಿಲ್ಲ. ಸ್ವಲ್ಪ ಸಮಯದ ನಂತರ ಹೇಗೋ ಚೇತರಿಸಿಕೊಂಡು, ನಾನು ಹೇಳಿದೆ, "ಅಮ್ಮ, ನೀವು ನನ್ನನ್ನು ಮನೆಗೆ ಹೋಗಲು ಹೇಳುತ್ತಿರುವಿರಿ. ಹಾಗಾದರೆ ನಾನು ಅಲ್ಲಿ ಏನು ಮಾಡಲಿ?"

"ಏಕೆ, ಧ್ಯಾನ, ಜಪ, ಪೂಜೆ ಮತ್ತು ಪವಿತ್ರ ಗ್ರಂಥಗಳ ಅಧ್ಯಯನ—ಇವುಗಳಿಂದ ನಿನ್ನ ಕಾಲವನ್ನು ಕಳೆಯಬಹುದು."

ಕೆಳಗೆ ಇಳಿದುಬರುತ್ತ ನನಗೆ ಕಣ್ಣೀರನ್ನು ತಡೆಯಲಾಗಲಿಲ್ಲ. ತೋಟದ ಒಂದು ನಿರ್ಜನ ಮೂಲೆಗೆ ಹೋಗಿ ಬಿಕ್ಕಿ ಬಿಕ್ಕಿ ಅತ್ತೆ. ನಂತರ ಬೈಠಕ್‌ಖಾನೆಯಲ್ಲಿ ಒಬ್ಬನೇ ಕುಳಿತು ಭಾರಿ ಮೋಡಗಳು ನನ್ನನ್ನು ಕವಿದಿರುವುವೆಂದು ಭಾವಿಸಿದೆ. ಮತ್ತೆ ಮನೆಗೆ ಹಿಂತಿರುಗುವ ಆಲೋಚನೆಯೇ ನನ್ನ ತಲೆಯ ಮೇಲೆ ಸಿಡಿಲೆರಗಿದಂತಾಯಿತು.

ಆಗ ಸ್ವಾಮಿ ಯೋಗಾನಂದರು ಅಲ್ಲಿಗೆ ಬಂದರು ಮತ್ತು ಗೋಲಾಪ್‌ಮಾ ನಡೆದುದನ್ನು ಅವರಿಗೆ ವಿವರಿಸಿದರು: "ಕಾಲಿಕೃಷ್ಣ ಕೃಶನಾಗಿರುವುದನ್ನು ನೋಡಿ ಶ್ರೀಮಾತೆಗೆ ನೋವಾಯಿತು. ಅದಕ್ಕೆ ಅವರು ಅವನನ್ನು ಅವನ ಮನೆಯಲ್ಲಿ ಸ್ವಲ್ಪಕಾಲ ಇರಲು ಹೇಳಿದರು. ಆದರೆ ಹೀಗೆ ವಿಧಿಸಿದುದಕ್ಕಾಗಿ ಅವರೇ ಪರಿತಪಿಸುತ್ತಿರುವರು. ಅವರು ನನಗೆ ಹೇಳುತ್ತಿದ್ದರು: 'ಹಾ! ಆ ಹುಡುಗನ ಅಸ್ವಸ್ಥತೆಯನ್ನು ನೋಡಿ ನನಗೆ ನಿಜವಾಗಿ ಗಾಬರಿ ಆಯಿತು. ಅವನಿಗೆ ಮೇಲಿಂದ ಮೇಲೆ ಜ್ವರ ಬಂದಿತು. ಮಠದ ಅಪೌಷ್ಟಿಕ ಆಹಾರ ಕೂಡ ಅವನ ಆರೋಗ್ಯಕ್ಕೆ ಸಹಕಾರಿಯಲ್ಲ. ಆದುದರಿಂದ ಅವನಿಗೆ ಮನೆಗೆ ಹೋಗಿ ಒಳ್ಳೆಯ ಆಹಾರವನ್ನು ತೆಗೆದುಕೊಂಡು ಆರೋಗ್ಯವನ್ನು ಸುಧಾರಿಸಿಕೊಳ್ಳಲು ಹೇಳಿದೆ. ಆದರೆ ನನ್ನ ಮಾತು ಅವನ ಮನಸ್ಸಿಗೆ ನೋವುಂಟುಮಾಡಿದೆ ಮತ್ತು ನನ್ನ ಕಣ್ಣುಗಳೂ ಕೂಡ ಕಣ್ಣೀರಿನಿಂದ ಒದ್ದೆಯಾಗಿವೆ.' "

ಸ್ವಾಮಿ ಯೋಗಾನಂದರು ನನಗೆ ಸಮಾಧಾನ ಮಾಡಿದರು. "ನಿನಗೆ ದೀಕ್ಷೆ ಆಗಿರುವುದೇ?" ಎಂದು ಕೇಳಿದರು. "ಇಲ್ಲ, ನನಗೆ ಅಂತಹುದೇನೂ ಆಗಿಲ್ಲ" ಎಂದು ಉತ್ತರವಿತ್ತೆ. "ಹಾಗಾದರೆ ನೀನೇಕೆ ಯಾವ ರೀತಿ ಧ್ಯಾನ ಮತ್ತು ಜಪವನ್ನು ಮನೆಯಲ್ಲಿ ಮಾಡಲಿ ಎಂದು ಶ್ರೀಮಾತೆಯವರನ್ನು ಕೇಳಲಿಲ್ಲ?" ಎಂದು ಅವರು ಹೇಳಿದರು. "ಸರಿ, ನಾಳೆ ನೀನು ಸ್ನಾನ ಮಾಡಿದ ನಂತರ ಅವರನ್ನು ಕೇಳು," ಎಂದು ನನಗೆ ಸೂಚಿಸಿದರು. ಸ್ವಾಮಿಗಳ ಮಾತಿನಿಂದ ನನಗೆ ಜ್ಞಾನೋದಯವಾದಂತಾಯಿತು. ಅಲ್ಲಿಯ ವರೆಗೆ ನನಗೆ ಶ್ರೀಮಾತೆಯವರು ಯಾರಿಗಾದರೂ ದೀಕ್ಷೆ ಕೊಡು ವರು ಎಂಬುದೇ ಗೊತ್ತಿರಲಿಲ್ಲ. ಸ್ವಾಮಿ ಯೋಗಾನಂದರ ಸೂಚನೆಯಂತೆ ಮಾರನೆ ಬೆಳಗ್ಗೆ ಶ್ರೀಮಾತೆಯವರು ಪೂಜೆ ಮುಗಿಸಿದ ಮೇಲೆ ನಾನು ಅವರ ಬಳಿ ಹೋಗಿ ನನಗೆ ಹೇಳಿ ಕೊಟ್ಟಿದ್ದ ಪ್ರಶ್ನೆಯನ್ನು ಕೇಳಿದೆ. ಆಗ ಶ್ರೀಮಾತೆಯವರು ನನಗೆ ವಿಧಿವತ್ತಾಗಿ ದೀಕ್ಷೆಯನ್ನು ಕೊಟ್ಟರು. ಜಪ ಮತ್ತು ಧ್ಯಾನಕ್ಕೆ ಅವರು ಕೊಟ್ಟ ಮಂತ್ರ, ನಾನು ಆವರೆಗೆ ಮಾಡುತ್ತಿದ್ದ ಸಾಧನೆಯ ರೀತಿಗೆ ಸರಿಹೊಂದುತ್ತಿರಲಿಲ್ಲ. ಆದುದರಿಂದ ನನಗೆ ಸ್ವಲ್ಪ ತಬ್ಬಿಬ್ಬಾಗಿ ಅವರನ್ನು ನೇರವಾಗಿ ಕೇಳಿದೆ, "ತಾಯಿ, ನಾನು ಈ ರೀತಿಯಾಗಿ ದೇವರನ್ನು ಧ್ಯಾನಿಸುತ್ತಿದ್ದೆ ಮತ್ತು ಅದು ನನಗೆ ಬಹಳ ಸಮಾಧಾನವನ್ನು ನೀಡುವುದು," ಎಂದು. "ಇಲ್ಲ ಮಗು, ನೀನು ಯಾವುದನ್ನು ನನ್ನಿಂದ ಪಡೆದಿರುವೆಯೋ ಅದು ನಿನಗೆ ಉತ್ತಮ" ಎಂದು ಚುಟುಕಾಗಿ ಹೇಳಿದರು. ವಿಚಿತ್ರ! ಯಾವಾಗ ಈ ಮಾತುಗಳು ಅವರ ಬಾಯಿಂದ ಬಂದುವೋ ಅವು ಒಂದು ಪವಾಡವನ್ನು ಮಾಡಿದುವು. ಅವು ಆ ಕ್ಷಣದಲ್ಲಿಯೇ ಸಾಧನೆಯ ಬಗ್ಗೆ ಇದ್ದ ನನ್ನ ದೃಷ್ಟಿಕೋನವನ್ನು ಪರಿವರ್ತಿಸಿದುದನ್ನು ನನ್ನೊಳಗೆ ಅನುಭವಿಸಿದೆ. ಹಿಂದಿನ ಭಾವನೆಗಳೆಲ್ಲಾ ಮಾಯ ವಾದುವು. ಶ್ರೀಮಾತೆ ನನ್ನ ಮುಂದಿಟ್ಟ ಹೊಸ ಆದರ್ಶ ನನ್ನ ಚೈತನ್ಯವನ್ನು ಅದ್ಭುತವಾದ ಸ್ಫೂರ್ತಿ ಮತ್ತು ಅವರ್ಣನೀಯ ಶಾಂತಿಯಿಂದ ಸಂಪೂರ್ಣವಾಗಿ ತುಂಬಿತು. ಇನ್ನು ಮನೆಗೆ ಹಿಂತಿರುಗುವುದು ಭಯಂಕರ ಅನುಭವದಂತೆ ತೋರಲಿಲ್ಲ, ಬದಲು ಸ್ವಲ್ಪಕಾಲ ಉತ್ಕಟ ಸಾಧನೆಯನ್ನು ಮಾಡಲು ಅದೊಂದು ಅವಕಾಶವೆಂಬಂತೆ ಕಂಡಿತು.

ಇಡೀ ದಿನವನ್ನು ಶ್ರೀಮಾತೆಯವರ ಸ್ಥಳದಲ್ಲಿ ಕಳೆದೆ ಮತ್ತು ಸಂಜೆ ಆಲಂಬಜಾರ್ ಮಠಕ್ಕೆ ತೆರಳಬೇಕಿತ್ತು. ಅದು ಜುಲೈ ತಿಂಗಳು. ಬಂಗಾಳದಲ್ಲಿ ಮಳೆಗಾಲದ ಮಧ್ಯಭಾಗ. ಗಂಗಾನದಿ ತುಂಬಿ ಹರಿದಿತ್ತು. ವಾತಾವರಣ ಕಪ್ಪು ತೆರೆಯಿಂದ ಆವೃತ ವಾಗಿತ್ತು ಮತ್ತು ಇನ್ನೇನು ಸಂಜೆಗತ್ತಲು ಆವರಿಸಬೇಕಾಗಿತ್ತು. ಮಳೆ ಹನಿಯಾಗಿ ಬೀಳುತ್ತಿತ್ತು. ಇದ್ದಕ್ಕಿದ್ದಂತೆ ನನ್ನ ಹೃದಯದ ಆಳದಲ್ಲಿ ದುಃಖ ಒತ್ತಿ ಬರುತ್ತಿತ್ತು. ಸಂತೋಷ ಮತ್ತು ಶಾಂತಿಯಿಂದ ತುಂಬಿದ ಮಠ, ಸ್ವಲ್ಪ ಕಾಲಕ್ಕಾದರೂ, ಇನ್ನೇನು ನನ್ನಿಂದ ದೂರವಾಗಲಿರುವುದು! ಶ್ರೀಮಾತೆಯವರೇನೋ ಆಶೀರ್ವದಿಸಿ ನನಗೆ ಭರವಸೆಯನ್ನಿತ್ತಿದ್ದರು—ಆದರೂ ನನ್ನೊಳಗೆ ಒಂದು ಬಗೆಯ ಕಳವಳ ಇತ್ತು. ಹೊರಗಿನ ಮಂಕಾದ ಮೋಡದ ವಾತಾವರಣ ನನ್ನ ಮನಸ್ಸನ್ನು ಪ್ರತಿಬಿಂಬಿಸುತ್ತಿತ್ತು. ಭಾರಹೃದಯದಿಂದ ನಾನು ಶ್ರೀಮಾತೆಯವರ ಬಳಿ ಹೋಗಿ ಹೇಳಿದೆ, "ತಾಯಿ, ನಾನಿನ್ನು ಹೋಗುವೆನು." ಅವರು ಹೇಳಿದರು, "ಆಗಲಿ ಮಗು, ಹೊತ್ತಾಗಿದೆ. ಒಳ್ಳೆಯದು, ಆಗಾಗ ಬರುತ್ತಿರು. ನಿನ್ನ ದೇಹ ಬಲವಾಗುವಂತೆ ನೋಡಿಕೋ." ನಂತರ ಅವರು ಮಾತೆಯ ಆಶೀರ್ವಾದದಂತೆ ನನ್ನ ಗಲ್ಲವನ್ನು ಮುಟ್ಟಿದರು. ನಾನು ಮನೆಯಿಂದ ಹೊರಗೆ ಹೋಗಿ ಹತ್ತಿರದ ದೋಣಿಯ ಘಾಟಿನಲ್ಲಿ ದೋಣಿಯೊಂದರಲ್ಲಿ ಕುಳಿತೆ. ಉತ್ತರ ಮುಖವಾಗಿ ಚಲಿಸಿದ ದೋಣಿ ತೋಟದ ಮನೆಯ ಮುಂದೆ ಹಾದು ಹೋಯಿತು. ಆ ಸಂಜೆಗಂಪಿನ ಹಿನ್ನೆಲೆಯಲ್ಲಿ ಮಹಡಿಯ ಮೇಲಿದ್ದ ಶ್ರೀಮಾತೆಯವರ ಕೊಠಡಿಯ ಕಡೆ ನೋಡಿದೆ. ಅವರು ಮಾಡಿನ ಅಂಗಳದಲ್ಲಿ ನಿಂತಿದ್ದರು. ಅವರ ನೋಟ ಗಂಗಾನದಿಯ ಕಡೆ—ದೋಣಿಯ ಮೇಲೆ—ನೆಟ್ಟಿತ್ತು! ಎಲ್ಲಿಯ ವರೆಗೆ ದೋಣಿಯಿಂದ ಆ ಮನೆ ಕಾಣಿಸುತ್ತಿತ್ತೊ ಅಲ್ಲಿಯವರೆಗೆ ಅವರು ಹಾಗೆಯೇ ನಿಂತಿದ್ದರು. ನನ್ನ ಹೃದಯ ಭಾವಗಳಿಂದ ತುಂಬಿ ಹರಿಯಿತು ಮತ್ತು ಧಾರಾಕಾರವಾಗಿ ಕಣ್ಣೀರು ಸುರಿ ಯಿತು. ನಂತರ ತಿಳಿಯಿತು, ತುಂತುರು ಮಳೆಯಲ್ಲಿ ಅವರು ಆ ರೀತಿ ನಿಂತುಕೊಂಡಿದುದಕ್ಕಾಗಿ ಗೋಲಾಪ್‌ಮಾ ಆಕ್ಷೇಪಿಸಿದ ರಂತೆ. ಅದಕ್ಕ ಅವರು ಬಾಷ್ಪಗಳಿಂದ ತೊಯ್ದ ಕಣ್ಣುಗಳಿಂದ ಹೇಳಿದರಂತೆ, "ಓ, ಆ ಹುಡುಗ ಎಷ್ಟು ದುಃಖಿತನಾಗಿರಬೇಕೆಂದು ನಾನು ಯೋಚಿಸುತ್ತಿದ್ದೆ. ಆದುದರಿಂದ ನಾನು ಅವನ ಕಡೆ ನೋಡುತ್ತಿರುವೆನು."

ಎಂತಹ ಅಪರಿಮಿತ ಪ್ರೀತಿ ಮತ್ತು ವಾತ್ಸಲ್ಯ, ಅದೂ ದೀನ ಅನರ್ಹ ಮಗನ ಮೇಲೆ! ಯಾರು ಶ್ರೀಮಾತೆಯವರನ್ನು ಕಂಡಿಲ್ಲವೋ ಮತ್ತು ಈ ಅನುಭವವನ್ನು ಸ್ವತಃ ಪಡೆದಿಲ್ಲವೋ ಅವರಿಗೆ ಇದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

❖